## ಸ್ಥೂಲನೋಟ

### 1. ಸರ್ಕಾರಿ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳ ಕಾರ್ಯವೈಖರಿಯತ್ತ ಒಂದು ಸಾಮಾನ್ಯ ಅವಲೋಕನ

ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯು, ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 139 ಹಾಗೂ 143ರಿಂದ ನಿಯಂತ್ರಿಸಲ್ಪಡುತ್ತದೆ. ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಸಿಎಜಿ) ನೇಮಕ ಮಾಡುವ ಶಾಸನಬದ್ಧ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡುತ್ತಾರೆ. ಈ ಲೆಕ್ಕಪತ್ರಗಳನ್ನು ಸಿಎಜಿ ಪೂರಕ ಲೆಕ್ಕಪರಿಶೋಧನೆ ಮಾಡುತ್ತಾರೆ. ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಸಂಬಂಧಿತ ಶಾಸನಗಳಿಂದ ನಿಯಂತ್ರಿಸಲ್ಪಡುತ್ತದೆ. 31 ಮಾರ್ಚ್ 2015ರಲ್ಲಿದ್ದಂತೆ, ಕರ್ನಾಟಕ ರಾಜ್ಯವು 81 ಕಾರ್ಯನಿರತ ಸಾರ್ವಜನಿಕ ವಲಯದ ಉದ್ದಿಮೆಗಳನ್ನು (75 ಕಂಪನಿಗಳು ಹಾಗೂ 6 ಶಾಸನಬದ್ಧ ನಿಗಮಗಳು) ಹಾಗೂ 12 ಕಾರ್ಯಸ್ಥಗಿತ ಸಾರ್ವಜನಿಕ ವಲಯದ ಉದ್ದಿಮೆಗಳನ್ನು (ಎಲ್ಲವೂ ಕಂಪನಿಗಳು)ಹೊಂದಿತ್ತು. ಅವುಗಳು, 1.92 ಲಕ್ಷ ಉದ್ಯೋಗಿಗಳನ್ನು ನೇಮಕ ಮಾಡಿಕೊಂಡಿದ್ದವು. ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳು 2014–15 ಸಾಲಿನಲ್ಲಿ ಇತ್ತೀಚಿನ ಅಂತಿಮ ರೂಪಕ್ಕೆ ತರಲಾದಂತಹ ಲೆಕ್ಕಪತ್ರಗಳ ಪ್ರಕಾರ ₹ 48,765.18 ಕೋಟಿ ಮೊತ್ತದಷ್ಟು ವಹಿವಾಟನ್ನು ದಾಖಲಿಸಿದ್ದವು. ಈ ವಹಿವಾಟು 2014–15 ಸಾಲಿಗೆ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇಕಡಾ 7.12ಕ್ಕೆ ಸಮನಾಗಿತ್ತು. ಇದು ಸಾರ್ವಜನಿಕವಲಯದ ಉದ್ದಿಮೆಗಳು ಆರ್ಥಿಕ ವಲಯದಲ್ಲಿ ವಹಿಸಿದ್ದ ಪ್ರಮುಖ ಪಾತ್ರವನ್ನು ಸೂಚಿಸುತ್ತಿತ್ತು. ಸಾರ್ವಜನಿಕ ವಲಯದ ಉದ್ದಿಮೆಗಳು, ಅವುಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲಾದಂತಹ ಲೆಕ್ಕಪತ್ರಗಳ ಪ್ರಕಾರ, ₹ 731.66 ಕೋಟಿ ಮೊತ್ತದಷ್ಟು ಕ್ರೋಡೀಕೃತ ಲಾಭವನ್ನು ಹೊಂದಿದ್ದವು.

***ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಹೂಡಿಕೆ***

31 ಮಾರ್ಚ್ 2015ರಲ್ಲಿದ್ದಂತೆ, 93 ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿನ ಹೂಡಿಕೆಯು ₹ 83,282.11 ಕೋಟಿ ಆಗಿತ್ತು. 2014–15ರಲ್ಲಿ ಮೂಲಭೂತಸೌಕರ್ಯಗಳ ವಲಯದಲ್ಲಿನ ಹೂಡಿಕೆಯು ಒಟ್ಟಾರೆ ಹೂಡಿಕೆಯ ಶೇಕಡಾ 50.08ರಷ್ಟಿತ್ತು ಹಾಗೂ ವಿದ್ಯುತ್ ವಲಯಕ್ಕೆ ಸಂಬಂಧಿಸಿದಂತೆ ಶೇಕಡಾ 40.09ರಷ್ಟಿತ್ತು. ಸರ್ಕಾರವು 2014–15ರಲ್ಲಿ ಈಕ್ವಿಟಿ, ಸಾಲಗಳು ಹಾಗೂ ಅನುದಾನಗಳ ಕಡೆಗೆ ₹ 13,957.53ಕೋಟಿ ಮೊತ್ತದಷ್ಟು ಕೊಡುಗೆಯನ್ನು ನೀಡಿತ್ತು.

***ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯನಿರ್ವಹಣೆ***

ಸೆಪ್ಟಂಬರ್ 2015ರ ಅಂತ್ಯದಲ್ಲಿದ್ದಂತೆ, ಕಾರ್ಯನಿರತ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳು, ಅವುಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲಾದಂತಹ ಲೆಕ್ಕಪತ್ರಗಳ ಪ್ರಕಾರ, ಒಟ್ಟಾರೆಯಾಗಿ ₹ 1,438.53 ಕೋಟಿ ಮೊತ್ತದಷ್ಟು ಲಾಭವನ್ನು ಗಳಿಸಿದ್ದವು ಹಾಗೂ ₹ 899.59 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿದ್ದವು. ಲಾಭಕ್ಕೆ ಪ್ರಮುಖ ಕೊಡುಗೆಯನ್ನು ನೀಡಿದ್ದ ಕಂಪನಿಗಳೆಂದರೆ ಮೈಸೂರು ಮಿನರಲ್ಸ್ ನಿಯಮಿತ (₹ 313.53 ಕೋಟಿ), ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ನಿಯಮಿತ (₹ 144.63ಕೋಟಿ) ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (₹ 113.44ಕೋಟಿ).ಕರ್ನಾಟಕ ನೀರಾವರಿ ನಿಗಮ ನಿಯಮಿತ (₹ 295.59ಕೋಟಿ) ಹಾಗೂ ಬೆಂಗಳೂರು ಮೆಟ್ರೊಪಾಲಿಟನ್ ಸಾರಿಗೆ ನಿಗಮ (ಬಿಎಂಟಿಸಿ) (₹ 147.59 ಕೋಟಿ) ಭಾರೀ ನಷ್ಟವನ್ನು ಅನುಭವಿಸಿದ್ದವು.

ಲೆಕ್ಕಪರಿಶೋಧನೆಯು ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯವೈಖರಿಯಲ್ಲಿ ವಿವಿಧ ಲೋಪದೋಷಗಳನ್ನು ಗಮನಿಸಿತು. ಈ ವರದಿಯ ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿರುವ ಪ್ರಕರಣಗಳು ₹ 758.70 ಕೋಟಿ ಮೊತ್ತದಷ್ಟು ಹಣಕಾಸಿನ ಪ್ರಭಾವವನ್ನು ಹೊಂದಿದ್ದವು ಎಂಬುದನ್ನು ಸೂಚಿಸುತ್ತಿದ್ದವು. ಉತ್ತಮ ನಿರ್ವಹಣೆಯೊಂದಿಗೆ ನಷ್ಟಗಳನ್ನು ಕನಿಷ್ಠ ರೂಪಕ್ಕೆ ತರಬಹುದಿತ್ತು ಅಥವಾ ಲಾಭಗಳನ್ನು ಗಮನಾರ್ಹವಾಗಿ ಹೆಚ್ಚಳಗೊಳಿಸಬಹುದಿತ್ತು. ಸಾರ್ವಜನಿಕ ವಲಯದ ಉದ್ದಿಮೆಗಳಕಾರ್ಯವೈಖರಿಯಲ್ಲಿ ಹೆಚ್ಚಿನ ಕಸಬುದಾರಿಕೆ ಹಾಗೂ ಉತ್ತರದಾಯಿತ್ವದ ಅಗತ್ಯತೆಯಿದೆ.

### ಲೆಕ್ಕಪತ್ರಗಳ ಗುಣಮಟ್ಟ

ಕಾರ್ಯನಿರತ ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಗುಣಮಟ್ಟವು ಉತ್ತಮಗೊಳ್ಳುವ ಅಗತ್ಯತೆಯಿದೆ. ಪ್ರಸಕ್ತ ಸಾಲಿನಲ್ಲಿ, ಅಂತಿಮ ರೂಪಕ್ಕೆ ತರಲಾದ 75 ಲೆಕ್ಕಪತ್ರಗಳ ಪೈಕಿ, ಶಾಸನಬದ್ಧ ಲೆಕ್ಕಪರಿಶೋಧಕರು 25 ಲೆಕ್ಕಪತ್ರಗಳ ಮೇಲೆ ಷರತ್ತು ರಹಿತ ವರದಿಗಳನ್ನು ನೀಡಿದ್ದರು, 47 ಲೆಕ್ಕಪತ್ರಗಳ ಮೇಲೆ ಷರತ್ತುಬದ್ಧ ವರದಿಗಳನ್ನು ನೀಡಿದ್ದರು ಹಾಗೂ 3 ಲೆಕ್ಕಪತ್ರಗಳ ಮೇಲೆ ಪ್ರತಿಕೂಲ ವರದಿಗಳನ್ನು (ಅಂದರೆ ಲೆಕ್ಕಪತ್ರಗಳು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತ ಸ್ಥಿತಿಗತಿಯನ್ನು ಪ್ರತಿಬಿಂಬಿಸುವುದಿಲ್ಲ ಎಂಬ ಅರ್ಥವನ್ನು ಕೊಡುವಂತಹ) ನೀಡಿದ್ದರು. ಪ್ರಸಕ್ತ ಸಾಲಿನಲ್ಲಿ 33 ಕಂಪನಿಗಳಲ್ಲಿ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸದಿದ್ದಂತಹ 101 ದೃಷ್ಟಾಂತಗಳು ಇದ್ದವಾದ್ದರಿಂದ, ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಜೊತೆ ಕಂಪನಿಗಳ ಅನುಸರಣೆಯು ನಿಕೃಷ್ಟಮಟ್ಟದಲ್ಲಿತ್ತು.

### ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಬಾಕಿಗಳು ಹಾಗೂ ಕಾರ್ಯಚಟುವಟಿಕೆಗಳ ಸಮಾಪನ

ಮೂವತ್ತೆಂಟು ಕಾರ್ಯನಿರತ ಸಾರ್ವಜನಿಕ ವಲಯದ ಉದ್ದಿಮೆಗಳು ಸೆಪ್ಟಂಬರ್ 2015ರ ಅಂತ್ಯದಲ್ಲಿದ್ದಂತೆ 44 ಲೆಕ್ಕಪತ್ರಗಳನ್ನು ಬಾಕಿ ಉಳಿಸಿಕೊಂಡಿದ್ದವು. ಬಾಕಿಗಳು 2013–14 ಹಾಗೂ 2014–15 ಸಾಲುಗಳಿಗೆ ಸಂಬಂಧಿಸಿದ್ದವು. ತಮ್ಮ ಕಾರ್ಯಚಟುವಟಿಕೆಗಳ ಸಮಾಪನ ಪ್ರಕ್ರಿಯೆಯ ಅಡಿಯಲ್ಲಿದ್ದ ಐದು ಸಾರ್ವಜನಿಕ ವಲಯದ ಉದ್ದಿಮೆಗಳೂ ಸೇರಿದಂತೆ 12 ಕಾರ್ಯಸ್ಥಗಿತ ಸಾರ್ವಜನಿಕ ವಲಯದ ಉದ್ದಿಮೆಗಳು ಇದ್ದವು. ಸರ್ಕಾರವು ಈ ಕಾರ್ಯಸ್ಥಗಿತ ಕಂಪನಿಗಳನ್ನು ಪುನರ್–ಆರಂಭಗೊಳಿಸಲು ಅಥವಾ ಮುಕ್ತಾಯಗೊಳಿಸುವ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕು.

## 2. ಸರ್ಕಾರಿ ಕಂಪನಿಗಳಿಗೆ ಸಂಬಂಧಿಸಿದಂತೆ ಸಾಧನಾ ಲೆಕ್ಕಪರಿಶೋಧನೆಗಳು

ಈ ವರದಿಯು, **'ಕರ್ನಾಟಕದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಕಾರ್ಯಗತಗೊಳಿಸಿದ ನಿರಂತರ ಜ್ಯೋತಿ ಯೋಜನೆ' ಹಾಗೂ 'ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ'** ಈ ವಿಷಯಗಳ ಮೇಲಿನ ಸಾಧನಾ ಲೆಕ್ಕಪರಿಶೋಧನಾ ವರದಿಗಳನ್ನು ಒಳಗೊಂಡಿದೆ. ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಕಾರ್ಯನಿರ್ವಹಣೆಯ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

- **'ಕರ್ನಾಟಕದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಕಾರ್ಯಗತಗೊಳಿಸಿದ ನಿರಂತರ ಜ್ಯೋತಿ ಯೋಜನೆ'ಯ ಮೇಲಿನ ಸಾಧನಾ ಲೆಕ್ಕಪರಿಶೋಧನೆ**

### ಪೀಠಿಕೆ

ಕರ್ನಾಟಕವು ವಿದ್ಯುಚ್ಛಕ್ತಿಯ ಅಭಾವವಿರುವ ರಾಜ್ಯವಾಗಿದ್ದು ಅಭಾವವು ಸುಮಾರು ಶೇಕಡ 15ರಷ್ಟಿದೆ. ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರವನ್ನು ತಗ್ಗಿಸುವ ದೃಷ್ಟಿಯಿಂದ ಕರ್ನಾಟಕದಲ್ಲಿನ ವಿದ್ಯುತ್ ಸರಬರಾಜು ಕಂಪನಿಗಳು ಗ್ರಾಮೀಣ ಹೊರೆ ನಿರ್ವಹಣಾ ವ್ಯವಸ್ಥೆ (ಆರ್‌ಎಲ್‌ಎಮ್‌ಎಸ್) ಎಂಬ ಪ್ರಾಯೋಜನೆಯನ್ನು ಅನುಷ್ಠಾನಗೊಳಿಸಿದವು (2005–09) ಮತ್ತು ದೊಡ್ಡ ಮಟ್ಟದ ಅಕ್ರಮ ಬದಲಾವಣೆಯಿಂದ ಇದು ವಿಫಲವಾಯಿತು. ಗುಜರಾತಿನಲ್ಲಿ ಫೀಡರ್‌ಗಳನ್ನು ಬೇರ್ಪಡಿಸುವ ಮೂಲಕ ಅನುಷ್ಠಾನಗೊಳಿಸಿದ ಪ್ರಾಯೋಜನೆಯ ಉಪಯೋಗಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಮಾಲೂರಿನ ಪರೀಕ್ಷಾ ಅಧ್ಯಯನದ ನಂತರ ನಿರಂತರ ಜ್ಯೋತಿ ಯೋಜನೆ (ಎನ್‌ಜೆವೈ)ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಿತು.

### ನಿರಂತರ ಜ್ಯೋತಿ ಯೋಜನೆ

ಎನ್‌ಜೆವೈನ ಪರಿಕಲ್ಪನೆಯು ಸಬ್ ಸ್ಟೇಷನ್‌ಗಳಲ್ಲಿ ಫೀಡರ್ (11 ಕೆವಿ) ಗಳನ್ನು ಬೇರ್ಪಡಿಸುವ ಮುಖಾಂತರ ಕೃಷಿ ಮತ್ತು ಕೃಷಿಯೇತರ ಹೊರೆಯನ್ನು ಇಬ್ಭಾಗ ಮಾಡಿ ಎನ್‌ಜೆವೈ ಫೀಡರ್ ಎಂದು ಕರೆಯಲ್ಪಡುವ ಒಂದು ಹೊಸ ಸ್ವತಂತ್ರ ಫೀಡರ್(11 ಕೆವಿ) ಸ್ಥಾಪಿಸಿ ಕೃಷಿಯೇತರ ಹೊರೆಯನ್ನು ಈ ಫೀಡರ್‌ಗೆ ವರ್ಗಮಾಡುವುದಾಗಿತ್ತು.

ಎನ್‌ಜೆವೈನ ಉದ್ದೇಶಗಳು ಕೃಷಿಯೇತರ ಬಳಕೆದಾರರಿಗೆ ದಿನದ 24 ಗಂಟೆಗಳೂ ನಿರಂತರ ಮತ್ತು ವಿಶ್ವಾಸಾರ್ಹ ವಿದ್ಯುತ್ತಿನ ಸರಬರಾಜು ಮಾಡುವುದು; ಕೃಷಿ ಹೊರೆಯ ಮೇಲೆ ಉತ್ತಮ ನಿಯಂತ್ರಣ ಹೊಂದುವುದು; ಪ್ರಸರಣಾ

ಮತ್ತು ವಿತರಣಾ ನಷ್ಟಗಳು, ಮಾಪಕಯುಕ್ತ ಮಾರಾಟದಲ್ಲಿ ಸುಧಾರಣೆ ಮತ್ತು ಶೃಂಗ ಹೊರೆಯಲ್ಲಿ ಇಳಿಕೆಗಳೇ ಆಗಿದ್ದವು.

### *ಲೆಕ್ಕ ಪರಿಶೋಧನೆಯ ಉದ್ದೇಶಗಳು*

**ಸಾಧನಾ ಲೆಕ್ಕಪರಿಶೋಧನೆಯನ್ನು ಎನ್‌ಜೆವೈನಲ್ಲಿ**

- ತಾಂತ್ರಿಕ ಅನುಕೂಲತೆಗಳು ಮತ್ತು ನಿಧಿಯ ಏರ್ಪಾಟುಗಳನ್ನು ನಿರ್ಣಯಿಸಿದ ನಂತರ ಯೋಜಿಸಿ ಅನುಷ್ಠಾನಗೊಳಿಸಲಾಗಿತ್ತೇ ಮತ್ತು
- ತನ್ನ ಉದೇಶಗಳನ್ನು ಸಾಧಿಸಲಾಗಿತ್ತೇ

ಎಂಬುದನ್ನು ನಿರ್ಣಯಿಸಲು ನಡೆಸಲಾಗಿತ್ತು.

### *ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು*

**ಲೆಕ್ಕಪರಿಶೋಧನೆಯ ಮೊದಲನೇ ಉದ್ದೇಶವಾದ ಎನ್‌ಜೆವೈನ ಯೋಜನೆ, ಅನುಷ್ಠಾನ ಮತ್ತು ನಿಧಿಯ ಹೊಂದಾಣಿಕೆಯನ್ನು ನಿರ್ಣಯಿಸುವ ಬಗೆಗಿನ ಲೆಕ್ಕಪರಿಶೋಧನೆಯ ಪರಿಣಾಮಗಳು ಈ ಕೆಳಗಿನವನ್ನು ಸೂಚಿಸುತ್ತವೆ:**

- ಜೆಸ್ಕಾಂ ಮತ್ತು ಹೆಸ್ಕಾಂಗಳಲ್ಲಿ ಪ್ರಾಯೋಗಿಕ ಯೋಜನೆಗಳನ್ನು ವಿಮರ್ಶೆ ಮಾಡುವ ಮೊದಲೇ ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳಿಸುವುದನ್ನು ಕೈಗೆತ್ತಿಕೊಂಡಿದ್ದರಿಂದ ಪೂರ್ವಯೋಜನೆಯು ನ್ಯೂನತೆಯಿಂದ ಕೂಡಿತ್ತು. ಮುಂದುವರಿದು, ಸೆಸ್ಕ್‌ನಲ್ಲಿ ಕಾಮಗಾರಿಗಳ ಅಂದಾಜುಗಳು ನೈಜತೆಯಿಂದ ಕೂಡಿರದೇ ಇದ್ದುದರಿಂದ ಕಾಲಕಾಲಕ್ಕೆ ಅವನ್ನು ಪರಿಷ್ಕರಿಸಲಾಯಿತು ಮತ್ತು ಇದರಿಂದ ಅನುಷ್ಠಾನದಲ್ಲಿ ವಿಳಂಬವಾಯಿತು.
- ಟೆಂಡರ್‌ಗಳನ್ನು ಅಂತಿಮಗೊಳಿಸುವಲ್ಲಿನ ವಿಳಂಬಗಳು (ಜೆಸ್ಕಾಂ), ಗುತ್ತಿಗೆದಾರರಿಂದ ವಿಳಂಬಗಳು (ಹೆಸ್ಕಾಂ), ಹೊರೆ ಇಬ್ಭಾಗಿಸುವಿಕೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಗಳು ಮತ್ತು ಎನ್‌ಜೆವೈ ಫೀಡರ್‌ಗಳನ್ನು ಎನ್‌ಜೆವೈ ಅಲ್ಲದ ಫೀಡರ್‌ಗಳ ಜೊತೆ ಜೋಡಣೆಯ ನಿದರ್ಶನಗಳು (ಎಲ್ಲಾ ಎಸ್ಕಾಂಗಳು) ಈ ಕಾರಣಗಳಿಂದ ಎನ್‌ಜೆವೈನ ಅನುಷ್ಠಾನವು ಬಾಧಿತವಾಯಿತು. ಕೃಷಿ ಫೀಡರ್‌ಗಳ ಮೇಲಿರುವ ತೋಟದ ಮನೆಗಳಿಗೆ ವಿದ್ಯುತ್ತನ್ನು ಪೂರೈಸುವುದಕ್ಕಾಗಿ ಉದ್ದೇಶಿಸಿದ್ದ ವಿಶೇಷ ವಿನ್ಯಾಸದ ಪರಿವರ್ತಕ (ಎಸ್‌ಡಿಟಿ)ವು ಅಧಿಕ ಹೊರೆಯ ವಿರುದ್ಧ ರಕ್ಷಣೆಯನ್ನು ಸೇರಿಸದೇ ಇದ್ದುದರಿಂದ ಅದರಲ್ಲಿ ವಿನ್ಯಾಸದ ನ್ಯೂನತೆಗಳಿದ್ದವು.
- ಬೆಸ್ಕಾಂ ಮತ್ತು ಸೆಸ್ಕ್‌ಗಳಲ್ಲಿ ನಿಧಿಯ ಏರ್ಪಾಟು ಅಸಮರ್ಪಕವಾಗಿದ್ದರಿಂದ ಎನ್‌ಜೆವೈನ ಅನುಷ್ಠಾನ ಬಾಧಿತವಾಗಬಹುದು.
- ಎನ್‌ಜೆವೈಯನ್ನು ಮೂರು ವರ್ಷಗಳ ಒಳಗೆ (2012ರ ಒಳಗೆ) ಪೂರ್ಣಗೊಳಿಸಬೇಕೆಂದು ಯೋಜಿಸಿದ್ದರೂ ಕಳೆದ ಮೂರು ವರ್ಷಗಳಿಂದ ಕುಂಟುತ್ತಾ ಸಾಗಿದೆ ಮತ್ತು 1,748 ಫೀಡರ್‌ಗಳ ಪೈಕಿ 543 ಫೀಡರ್‌ಗಳು ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ (ಮಾರ್ಚ್ 2015ರಂತೆ) ವಿದ್ಯುತ್ ಉಳಿತಾಯದ ನಷ್ಟವು ₹ 569.63 ಕೋಟಿ ರೂಪಾಯಿಗಳ ಮೌಲ್ಯದ 1,128.70 ದಶಲಕ್ಷ ಯೂನಿಟ್‌ಗಳಾಗಿತ್ತು.

**ಎನ್‌ಜೆವೈ ತನ್ನ ಉದ್ದೇಶಗಳನ್ನು ಸಾಧಿಸಿದೆಯೇ ಎಂಬುದನ್ನು ನಿರ್ಣಯಿಸುವ ಲೆಕ್ಕಪರಿಶೋಧನೆಯ ಎರಡನೇ ಉದ್ದೇಶದ ಬಗೆಗಿನ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಈ ಕೆಳಗಿನವು ಸೂಚಿಸುತ್ತವೆ:**

- ಎನ್‌ಜೆವೈ ಫೀಡರ್‌ಗಳಿಗೆ ಎಸ್ಕಾಂಗಳು ಸುಮಾರು 20 ಗಂಟೆಗಳ ಮೂರು ಫೇಸ್ ವಿದ್ಯುತ್ ಸರಬರಾಜು ಒದಗಿಸಿದ್ದವಾದರೂ ಅಡೆತಡೆಗಳು ಅವ್ಯಾಹತವಾಗಿ ಮುಂದುವರಿದುದ್ದರಿಂದ ವಿದ್ಯುತ್ ಸರಬರಾಜಿನ ಗುಣಮಟ್ಟ ಸುಧಾರಣೆಯಾಗಿರಲಿಲ್ಲ.
- ಶೃಂಗ ಹೊರೆಯಲ್ಲಿ ಇಳಿಕೆಯಾಗಿತ್ತು. ಆದರೆ ವಿದ್ಯುತ್ ಕೊರತೆಯ ಸ್ಥಿತಿಯಲ್ಲಿ ಐಪಿ ಫೀಡರ್‌ಗಳಿಗೆ ಶೃಂಗ ಗಂಟೆಗಳಲ್ಲಿ ವಿದ್ಯುತ್ ಸರಬರಾಜು ಮಾಡುವ ಮತ್ತು ನಿರ್ದಿಷ್ಟಪಡಿಸಿದ ಗಂಟೆಗಳಿಗಿಂತ ಹೆಚ್ಚಿನ ಅವಧಿಯಲ್ಲಿ ವಿದ್ಯುತ್ ಸರಬರಾಜುಮಾಡುವ ಪರಿಪಾಠವು ಕಳಪೆ ಹೊರೆ ನಿರ್ವಹಣೆಯನ್ನು ಸೂಚಿಸುತ್ತಿತ್ತು.
- ಪರೀಕ್ಷಾ ಪರಿಶೀಲನೆ ನಡೆಸಿದ ಫೀಡರ್‌ಗಳಲ್ಲಿ ಪ್ರತಿಶತ 40ರಷ್ಟು ಫೀಡರ್‌ಗಳ ಪ್ರಸರಣಾ ಮತ್ತು ವಿತರಣಾ ನಷ್ಟಗಳು ಪ್ರತಿಕೂಲ ಪ್ರವೃತ್ತಿ ತೋರಿದವು.

- ಮೂರು ಫೇಸ್ ಸರಬರಾಜು ಎನ್‌ಜೆವೈ ಪೂರ್ವದಲ್ಲಿ ಇದ್ದ 10 ಗಂಟೆಗಳಿಂದ ಎನ್‌ಜೆವೈ ನಂತರದಲ್ಲಿ 20ಕ್ಕೆ ಏರಿಕೆಯಾಗಿದ್ದರೂ, ಹೆಚ್ಚಿದ ಗಂಟೆಗಳ ಸರಬರಾಜು ಭಾಗಶ: ವಿದ್ಯುತ್ ಖರೀದಿಯಿಂದ ಆಗಿತ್ತೇಕೆಂದರೆ ವಿತರಣಾ ನಷ್ಟಗಳಲ್ಲಿ ಇಳಿಕೆ ಅಂದಾಜಿಸಿದಂತೆ ಆಗಿರಲಿಲ್ಲ.

- ಐಪಿ ಬಳಕೆಯನ್ನು ಡಿಟಿಸಿ/ಐಪಿ ಫೀಡರ್‌ಗಳ ಮೀಟರ್ ರೀಡಿಂಗ್‌ನ ಆಧಾರದ ಮೇಲೆ ನಿರ್ಣಯಿಸಬೇಕೆಂಬ ಕೆಈಆರ್‌ಸಿಯ ನಿರ್ದೇಶನವನ್ನು ಅನುಸರಿಸಲಾಗಿಲ್ಲ.

*ನಿರ್ಣಯಗಳು*

**ಲೆಕ್ಕಪರಿಶೋಧನೆಯು ತೀರ್ಮಾನಿಸಿದ್ದೇನೆಂದರೆ:**

- ಕೃಷಿಯೇತರ ಫೀಡರ್‌ಗಳಿಗೆ ಈ ಮುಂಚೆ ನೀಡುತ್ತಿದ್ದ 10 ಗಂಟೆಗಳ ಮೂರು ಫೇಸ್ ವಿದ್ಯುತ್ ಸರಬರಾಜಿಗೆ ಪ್ರತಿಯಾಗಿ ಎನ್‌ಜೆವೈನಲ್ಲಿ 20 ಗಂಟೆಗಳ ವಿದ್ಯುತ್ ಸರಬರಾಜು ನೀಡುತ್ತಿರುವುದು ಸಕಾರಾತ್ಮಕ ಫಲಿತಾಂಶವಾಗಿದೆ. ಈ ಸಾಧನೆಯು ಭಾಗಶ: ಹೆಚ್ಚುವರಿ ವಿದ್ಯುತ್ ಖರೀದಿಯಿಂದ ಸಾಧ್ಯವಾಗಿದೆ. ಆದರೂ, ಅಂದಾಜಿಸಿದಂತೆ ದಿನವೊಂದರಲ್ಲಿ 24 ಗಂಟೆಗಳ ಸರಬರಾಜನ್ನು ಸಾಧಿಸಲಿಲ್ಲ.

- ಅಡೆತಡೆಗಳು ಅವ್ಯಾಹತವಾಗಿ ಮುಂದುವರಿದಿದ್ದು ವಿದ್ಯುತ್ ಸರಬರಾಜಿನ ಗುಣಮಟ್ಟವು ಸುಧಾರಿಸಿರಲಿಲ್ಲ.

- ಹೆಚ್ಚಿಸಿದ ಗಂಟೆಗಳ (24 ಗಂಟೆಗಳು) ವಿದ್ಯುತ್ ಸರಬರಾಜನ್ನು ಅನುವು ಮಾಡುವುದಕ್ಕೆ ವಿತರಣಾ ನಷ್ಟಗಳಲ್ಲಿ ಇಳಿಕೆ ಎನ್‌ಜೆವೈಯಡಿಯಲ್ಲಿ ಅಂದಾಜಿಸಿದಂತೆ ಈವರೆಗೂ ಆಗಿರಲಿಲ್ಲ.

- ಮುಖ್ಯವಾಗಿ ಅಂದಾಜು ಪಟ್ಟಿಗಳನ್ನು ತಯಾರಿಸುವಲ್ಲಿ ನ್ಯೂನತೆಗಳು, ಟೆಂಡರಿಂಗ್‌ನಲ್ಲಿ ವಿಳಂಬ, ಹಾಲಿ ಫೀಡರ್‌ಗಳಿಂದ ಹೊರೆಯನ್ನು ಇಬ್ಭಾಗಿಸುವಿಕೆಯಲ್ಲಿ ವಿಳಂಬವಲ್ಲದೇ ಕೂಲಿಗಳ ಲಭ್ಯತೆ ಮತ್ತು ಶಾಸನಬದ್ಧ ತೆರವುಗಳನ್ನು ಪಡೆಯುವುದರಲ್ಲಿನ ತೊಂದರೆಗಳಿಂದ ಎನ್‌ಜೆವೈನ ಅನುಷ್ಠಾನದಲ್ಲಿ ವಿಳಂಬವಾಗಿತ್ತು.

- ಎನ್‌ಜೆವೈನ ಸಫಲತೆಯನ್ನು ಕಾಣುವುದರಲ್ಲಿ ಇದ್ದ ಅಪಾಯಗಳು ಇವನ್ನು ಒಳಗೊಂಡಿದ್ದವು:
    - ಗ್ರಾಮೀಣ/ಮಿಶ್ರ ಫೀಡರ್‌ಗಳಿಗೆ ಹೋಲಿಸಿದಲ್ಲಿ ಎನ್‌ಜೆವೈ ಫೀಡರ್‌ಗಳಲ್ಲಿ ವಿತರಣಾ ನಷ್ಟಗಳನ್ನು ಇಳಿಕೆಗೊಳಿಸುವಲ್ಲಿ ವಿಫಲತೆ,
    - ಅಧಿಕಹೊರೆ ರಕ್ಷಣೆಯನ್ನು ಎಸ್‌ಡಿಟಿಯಲ್ಲಿ ಅಳವಡಿಸದೇ ಇದ್ದುದರಿಂದ ಐಪಿ ಫೀಡರ್‌ಗಳಿಗೆ ಒಂದು ಫೇಸ್ ವಿದ್ಯುತ್ ನೀಡುವಲ್ಲಿ ವಿಫಲತೆ,
    - ರೋಸ್ಟರಿಂಗ್ ವ್ಯವಸ್ಥೆಯಲ್ಲಿ ಸಬ್‌ಸ್ಟೇಷನ್‌ನಲ್ಲಿ ಮಾನವ ಕಾರ್ಯಾಚರಣೆಯ (ಗ್ರೂಪ್ ಆಪರೇಟಿಂಗ್ ಸ್ವಿಚ್) ಮುಖಾಂತರ ವಿದ್ಯುತ್ ಸರಬರಾಜು ಮಾಡುತ್ತಿದ್ದುದು ಪರಿಸ್ಥಿತಿಯನ್ನು ಎನ್‌ಜೆವೈ ಪೂರ್ವದ ಕಾಲಮಾನಕ್ಕೆ ಕೊಂಡೊಯ್ದಿತು,
    - ಎನ್‌ಜೆವೈ ಫೀಡರ್‌ಗಳನ್ನು ಇತರ ಫೀಡರ್‌ಗಳ ಜೊತೆ ಹೊಂದಿಸಿದ್ದು ಮತ್ತು ಎಲ್‌ಟಿ ಬದಿಯ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಇದ್ದದ್ದು, ಮತ್ತು
    - ರಾಜ್ಯವು ವಿದ್ಯುತ್ ಕೊರತೆಯನ್ನು ಎದುರಿಸುತ್ತಿದ್ದರೂ ಐಪಿ ಫೀಡರ್‌ಗಳಿಗೆ ಶೃಂಗ ಗಂಟೆಗಳಲ್ಲಿ ಮತ್ತು ನಿಗದಿತ ಗಂಟೆಗಳಿಗಿಂತ ಹೆಚ್ಚಿನ ಗಂಟೆಗಳಲ್ಲಿ ವಿದ್ಯುತ್ ಸರಬರಾಜು ಮಾಡಿದ್ದುದು;

- ಎನ್‌ಜೆವೈನ ಅಡಿಯಲ್ಲಿ ಐಪಿ ಸೆಟ್‌ಗಳ ಬಳಕೆಯನ್ನು ಮಾಪಕೀಕರಣದ ಮೂಲಕ ನಿರ್ಣಯಿಸಬೇಕೆಂಬ ಕೆಈಆರ್‌ಸಿಯ ನಿರ್ದೇಶನವನ್ನು ಅನುಸರಣೆ ಮಾಡಿಲ್ಲ. ಇದರ ಪರಿಣಾಮವಾಗಿ ಕರ್ನಾಟಕ ಸರ್ಕಾರದಿಂದ ಪಡೆದ ಐಪಿ ಸೆಟ್ ಬಳಕೆದಾರರ ಸಹಾಯಧನವು ಪಾರದರ್ಶಕವಾಗಿರಲಿಲ್ಲ ಮತ್ತು ವಿತರಣಾ ನಷ್ಟಗಳು ನೈಜತೆಯಿಂದ ಕೂಡಿರಲಿಲ್ಲ.

*ಶಿಫಾರಸ್ಸುಗಳು*

**ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಶಿಫಾರಸ್ಸು ಮಾಡುತ್ತಿದೆ:**

- ದೊಡ್ಡ ಮಟ್ಟದ ಯೋಜನೆಗಳ ಕಾರ್ಯಗತಗೊಳಿಸುವ ಮುಂಚೆ ಎಸ್ಕಾಂಗಳು ಪ್ರಾಯೋಗಿಕ ಅಧ್ಯಯನದ ಫಲಿತಾಂಶಗಳ ವಿಶ್ಲೇಷಣೆ ಮಾಡಬೇಕು.

- ಸರ್ವೆ, ತನಿಖೆಗಳನ್ನು ಮಾಡಿದ ನಂತರ ಮತ್ತು ಇತರ ಯೋಜನೆಗಳಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು ಎಸ್ಕಾಂಗಳು ಅಂದಾಜುಗಳನ್ನು ತಯಾರಿಸಬೇಕು.

- ಸಿಂಧುತ್ವದ ಅವಧಿಯ ವಿಸ್ತರಣೆ/ಮರುಟೆಂಡರ್ ಮತ್ತು ತತ್ಪರಿಣಾಮದ ವಿಳಂಬಗಳು ಹಾಗೂ ವೆಚ್ಚದ ಏರಿಕೆಗಳನ್ನು ತಪ್ಪಿಸುವ ದೃಷ್ಟಿಯಿಂದ ಆರ್‌ಇಸಿ ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಹಣಕಾಸಿನ ಹೊಂದಾಣಿಕೆ ಸಾಕಷ್ಟು ಮುಂಚಿತವಾಗಿಯೇ ಹೊಂದಬೇಕೆಂಬ ಕರ್ನಾಟಕ ಸರ್ಕಾರದ ನಿರ್ದೇಶನಗಳನ್ನು ಎಸ್ಕಾಂಗಳು ಪಾಲಿಸಬೇಕು.

- ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವನ್ನು ತಡೆಗಟ್ಟಲು ಎಸ್ಕಾಂಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಗುತ್ತಿಗೆದಾರರ ಆರ್ಥಿಕ ಸಾಮರ್ಥ್ಯವನ್ನು ನಿರ್ಧರಿಸಿ ಕಾಮಗಾರಿಗಳನ್ನು ವಹಿಸಬೇಕು.

- ಇಬ್ಭಾಗಗೊಂಡ ಎನ್‌ಜೆವೈ ಫೀಡರ್‌ಗಳು ಎನ್‌ಜೆವೈ ಅಲ್ಲದ ಫೀಡರ್‌ಗಳ ಜೊತೆ ಜೋಡಣೆ ಹೊಂದಿಲ್ಲವೆಂಬುದನ್ನು ಎಸ್ಕಾಂಗಳು ಖಚಿತಪಡಿಸಿಕೊಳ್ಳಬೇಕು. ಇಬ್ಭಾಗಗೊಂಡ ಫೀಡರ್‌ಗಳಿಗೆ ಬ್ರೇಕರ್‌ಗಳನ್ನು ತುರ್ತಾಗಿ ಅಳವಡಿಸಲು ಕ್ರಮ ತೆಗೆದುಕೊಳ್ಳಬೇಕು, ಇಲ್ಲವಾದಲ್ಲಿ ಫೀಡರ್‌ಗಳನ್ನು ಎನ್‌ಜೆವೈಯಡಿಯಲ್ಲಿ ಇಬ್ಭಾಗಗೊಳಿಸುವ ಉದ್ದೇಶವು ಪರಾಭವಗೊಳ್ಳುತ್ತದೆ.

- ಎನ್‌ಜೆವೈನ ಉಪಯೋಗಗಳನ್ನು ಪಡೆಯಲು ಎಸ್ಕಾಂಗಳು ಅಧಿಕ ಹೊರೆ ರಕ್ಷಣೆಯೊಂದಿಗೆ ಎಸ್‌ಡಿಟಿಯ ಅಳವಡಿಕೆ ಮತ್ತು ಓಪನ್ ಡೆಲ್ಟಾ ಮಾದರಿಯ ಪರ ಮತ್ತು ವಿರುದ್ಧಗಳನ್ನು ವಿಶ್ಲೇಷಿಸಲು ಅಧ್ಯಯನವನ್ನು ಮಾಡಬೇಕು ಮತ್ತು ನಿರುಪಯುಕ್ತವಾಗಿ ಉಳಿದಿರುವ ಎಸ್‌ಡಿಟಿಗಳನ್ನು ಉಪಯೋಗಿಸುವುದರ ಕಾರ್ಯಸಾಧ್ಯತೆಯನ್ನು ಅನ್ವೇಷಿಸಬೇಕು.

- ಸ್ಕಾಡಾದ ವಿವರಗಳನ್ನು ಮೇಲ್ವಿಚಾರಣೆ ಮತ್ತು ವಿಮರ್ಶೆ ಮಾಡುವ ಮೂಲಕ ಎಸ್ಕಾಂಗಳು ಮತ್ತು ಕೆಪಿಟಿಸಿಎಲ್ ಸಬ್‌ಸ್ಟೇಷನ್‌ಗಳಲ್ಲಿ ನಿಯುಕ್ತಿಗೊಂಡಿರುವ ಸಿಬ್ಬಂದಿ, ಸರಬರಾಜಿಗೆ ನಿಗದಿತವಲ್ಲದ ಗಂಟೆಗಳಲ್ಲಿ ಐಪಿ ಫೀಡರ್‌ಗಳಿಗೆ ರೋಸ್ಟರಿಂಗ್‌ನ ಮೊರೆ ಹೋಗದೇ ಇರುವುದನ್ನು ಖಚಿತ ಪಡಿಸಿಕೊಳ್ಳಲು ಒಂದು ಕಾರ್ಯತಂತ್ರ ರೂಪಿಸಬೇಕು.

- ಸರಬರಾಜಿನ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕನಿಷ್ಠ ಅಡೆತಡೆಗಳು ಇರುವಂತೆ ನೋಡಿಕೊಳ್ಳಲು ಎಸ್ಕಾಂಗಳು ಬೇರೆ ಫೀಡರ್‌ಗಳ ಜೊತೆ ಕ್ರಾಸ್‌ಓವರ್‌ಗಳನ್ನು ಹೊಂದಿರುವ ಎನ್‌ಜೆವೈ ಫೀಡರ್‌ಗಳನ್ನು ಗುರುತಿಸಿ ಅವನ್ನು ಬದಲಿಸಬೇಕು.

- ಸುಧಾರಿತ ಹೊರೆ ನಿರ್ವಹಣೆಯನ್ನು ಹೊಂದಲು, ವಿದ್ಯುತ್ ಕೊರತೆಯ ಸ್ಥಿತಿಯಲ್ಲಿ, ಐಪಿ ಸೆಟ್‌ಗಳಿಗೆ ಶೃಂಗ ಗಂಟೆಗಳಲ್ಲಿ ಮತ್ತು ನಿಗದಿತ ಗಂಟೆಗಳಿಗಿಂತ ಹೆಚ್ಚಿನ ಅವಧಿಯ ವಿದ್ಯುತ್ ಸರಬರಾಜು ಮಾಡದಂತೆ ಸಬ್‌ಸ್ಟೇಷನ್‌ಗಳಲ್ಲಿರುವ ತಮ್ಮ ಸಿಬ್ಬಂದಿಗೆ ಎಸ್ಕಾಂಗಳು ಸೂಚನೆಗಳನ್ನು ನೀಡಬೇಕು ಮತ್ತು ಅವುಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು.

- ಅಧಿಕ ವೆಚ್ಚದಲ್ಲಿ ಹೆಚ್ಚುವರಿ ಖರೀದಿಗಳನ್ನು ಕಡಿಮೆಗೊಳಿಸಲು ಮತ್ತು ಎನ್‌ಜೆವೈನ ಅಡಿಯಲ್ಲಿ ಅಂದಾಜಿಸಿದ್ದ 24 ಗಂಟೆಗಳ ವಿದ್ಯುತ್ ಸರಬರಾಜನ್ನು ಒದಗಿಸಲು ಎಸ್ಕಾಂಗಳು ಇಬ್ಭಾಗಿಸಿದ ಫೀಡರ್‌ಗಳಲ್ಲಿ ಪ್ರಸರಣಾ ಮತ್ತು ವಿತರಣಾ ನಷ್ಟಗಳು ಇಳಿಕೆಯಾಗದಿರುವುದಕ್ಕೆ ಕಾರಣಗಳನ್ನು ವಿಮರ್ಶಿಸಬೇಕು.

- ಎನ್‌ಜೆವೈನ ಉದ್ದೇಶವಾದ ಪ್ರಸರಣಾ ಮತ್ತು ವಿತರಣಾ ನಷ್ಟಗಳಲ್ಲಿ ಇಳಿಕೆಯನ್ನು ಎಸ್ಕಾಂಗಳು ಪೂರ್ಣವಾಗಿ ಸಾಧಿಸದೇ ಇರುವುದು, ಅನುಷ್ಠಾನದಲ್ಲಿ ವಿಳಂಬ ಮತ್ತು ಹೆಚ್ಚುವರಿ ವಿದ್ಯುತ್ ಖರೀದಿಗಳ ಕಾರಣದಿಂದ ಕರ್ನಾಟಕ ಸರ್ಕಾರವು ಎನ್‌ಜೆವೈನ ಹಣಕಾಸಿನ ಏರ್ಪಾಟಿನ ಆರ್ಥಿಕ ಮಾದರಿಯನ್ನು ಪುನರ್ ಮಾಪನ ಮಾಡುವ ಅಗತ್ಯವಿದೆ.

- ಸಹಾಯಧನದ ಹಕ್ಕು ಬೇಡಿಕೆ ಮತ್ತು ವಿತರಣಾ ನಷ್ಟಗಳು ನೈಜತೆಯಿಂದ ಕೂಡಿರಲು ಐಪಿ ಬಳಕೆಯನ್ನು ಡಿಟಿಸಿ ಮತ್ತು ಐಪಿ ಫೀಡರ್‌ಗಳ ಮೀಟರ್ ರೀಡಿಂಗ್‌ಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕೆಂಬ ಕೆಈಆರ್‌ಸಿಯ ನಿರ್ದೇಶನಗಳನ್ನು ಅನುಸರಿಸಬೇಕು.

***(ಅಧ್ಯಾಯ 2.1)***

## ➢ 'ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ' ಮೇಲಿನ ಸಾಧನಾ ಲೆಕ್ಕಪರಿಶೋಧನೆ

*ಪೀಠಿಕೆ*

ಕೃಷ್ಣಾ ಮೇಲ್ದಂಡೆ ಯೋಜನೆಯು 492.25 ಮೀಟರುಗಳ ಎತ್ತರದ ನಾರಾಯಣಪುರ ಅಣೆಕಟ್ಟೆ ಹಾಗೂ 524.25 ಮೀಟರುಗಳ ಎತ್ತರದ ಆಲಮಟ್ಟಿ ಅಣೆಕಟ್ಟೆಯ ನಿರ್ಮಾಣವನ್ನು ಹಾಗೂ ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಾದ ವಿಜಯಪುರ, ಬಾಗಲಕೋಟೆ, ಕಲಬುರ್ಗಿ ಹಾಗೂ ರಾಯಚೂರು ಜಿಲ್ಲೆಗಳ ಕೆಲವು ನೀರಾವರಿ ಭಾಗಗಳಿಗೆ ನಾಲೆಗಳ ಜಾಲ–ಸಂಪರ್ಕವನ್ನು ಒಳಗೊಂಡಿದೆ.

ನಾರಾಯಣಪುರ ಹಾಗೂ ಆಲಮಟ್ಟಿ ಅಣೆಕಟ್ಟೆಗಳೆರಡರಿಂದಲೂ (ಜಲಾಶಯ ಮಟ್ಟದವರೆಗೆ 519.60 ಮೀಟರುಗಳು) ಹಿನ್ನೀರಿನ ಪ್ರಭಾವಕ್ಕೆ ಈಡಾಗಿದ್ದ 176 ಗ್ರಾಮಗಳ ಪೈಕಿ 173ರ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು 2001–02ರಲ್ಲಿ ಪೂರ್ಣಗೊಂಡಿದ್ದವು ಹಾಗೂ ಉಳಿಕೆ ಮೂರು ಗ್ರಾಮಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳು ಪ್ರಗತಿಯಲ್ಲಿದ್ದವು (ಸೆಪ್ಟಂಬರ್ 2015). ಬಾಗಲಕೋಟೆ ಪಟ್ಟಣದಲ್ಲಿರುವ ಜನತೆಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಜಲಾಶಯ ಮಟ್ಟದ 521 ಮೀಟರುಗಳವರೆಗೆ ಪೂರ್ಣಗೊಳಿಸಲಾಗಿತ್ತು ಹಾಗೂ ತದನಂತರದ ಮಟ್ಟಗಳಿಗೆ ಸಂಬಂಧಿಸಿದಂತೆ ಕಾಮಗಾರಿಯು ಪ್ರಗತಿಯಲ್ಲಿತ್ತು. ಅಲ್ಲದೇ, ನಾರಾಯಣಪುರ ಜಲಾಶಯದ ಪ್ರವಾಹಕ್ಕೆ ಈಡಾಗಿದ್ದ 14 ಗ್ರಾಮಗಳಿಗೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಪ್ರಗತಿಯಲ್ಲಿದ್ದವು.

ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವ ವಿಧಾನಗಳನ್ನು ಸರ್ಕಾರವು 1989–95ರಲ್ಲಿ ಕಾರ್ಯನಿರ್ವಾಹಕ ಆದೇಶಗಳ ಮೂಲಕ ನಿರ್ದಿಷ್ಟಪಡಿಸಿತ್ತು ಹಾಗೂ ಈ ಕಾರ್ಯನೀತಿಗಳು ಈಗಲೂ ಜಾರಿಯಲ್ಲಿವೆ (2015–16).

*ಕಾರ್ಯಗತಗೊಳಿಸುವ ಪ್ರಾಧಿಕಾರಗಳು*

ಸರ್ಕಾರದ ಸಂಪೂರ್ಣ ಒಡೆತನದ ಕಂಪನಿಯಾಗಿರುವ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತವು (ಕಂಪನಿ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿನ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳೂ ಸೇರಿದಂತೆ ನೀರಾವರಿ ಯೋಜನೆಗಳನ್ನು ಒಟ್ಟಾರೆಯಾಗಿ ಕಾರ್ಯಗತಗೊಳಿಸಲು ಜವಾಬ್ದಾರಿಯುತವಾಗಿತ್ತು. ಹಣಕಾಸನ್ನು ಸಾಲಗಳನ್ನು ಪಡೆಯುವುದರಿಂದ ಹಾಗೂ ರಾಜ್ಯ ಆಯವ್ಯಯದಿಂದ ಭರಿಸಲಾಗುತ್ತಿತ್ತು.

ಭೂ ಸ್ವಾಧೀನಗಳ ಆಯುಕ್ತರವರು ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳು ಹಾಗೂ ಪದನಿಮಿತ್ತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಭೂಸ್ವಾಧೀನಕ್ಕೆ ಅಧಿಕಾರವನ್ನು ನೀಡಲಾಗಿತ್ತು. ಬಾಗಲಕೋಟೆ ಪಟ್ಟಣದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿಯೇ ಪ್ರತ್ಯೇಕವಾಗಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿತ್ತು.

*ಲೆಕ್ಕಪರಿಶೋಧನೆಯ ಉದ್ದೇಶ*

ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಸ್ಥಳಾಂತರಗೊಂಡ ಜನತೆಗಾಗಿ, ಉದ್ದೇಶಿತ ಪ್ರಯೋಜನಗಳನ್ನು ಅವರುಗಳು ಪಡೆದುಕೊಳ್ಳಲು ಅನುಕೂಲ ಕಲ್ಪಿಸುವ ರೀತಿಯಲ್ಲಿ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಪ್ಯಾಕೇಜುಗಳನ್ನು ತ್ವರಿತಗತಿಯಲ್ಲಿ ಯೋಜಿಸಲಾಯಿತೇ ಹಾಗೂ ಕಾರ್ಯಗತಗೊಳಿಸಲಾಯಿತೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಾಧನಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

*ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು*

*ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿಯ ಅನುಪಸ್ಥಿತಿ*

ಸರ್ಕಾರವು, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಳ ಮೇಲೆ ವಿವಿಧ ಕಾರ್ಯನೀತಿಗಳನ್ನು ಚಿಂತಿಸಿದಂತೆ, ಕರ್ನಾಟಕ ಯೋಜನೆಗಳಿಂದ ಸ್ಥಳಾಂತರಗೊಂಡ ವ್ಯಕ್ತಿಗಳ ಪುನರ್ವಸತಿ ಅಧಿನಿಯಮ, 1987ನ್ನು ಅಧಿಸೂಚನೆ ಹೊರಡಿಸಿತು (ಆಗಸ್ಟ್ 1994). ಆದರೆ, ಸರ್ಕಾರವು ಅಧಿನಿಯಮವನ್ನು ಕಾರ್ಯರೂಪಕ್ಕೆ ತರಲಿಲ್ಲ. ಸರ್ಕಾರವು, ಅಕ್ಟೋಬರ್ 2007ರಲ್ಲಿ ಅಧಿಸೂಚನೆ ಹೊರಡಿಸಲ್ಪಟ್ಟ ರಾಷ್ಟ್ರೀಯ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಕಾರ್ಯನೀತಿ, 2007ನ್ನೂ

ಸಹ ಅಳವಡಿಸಿಕೊಂಡಿರಲಿಲ್ಲ.ಆದರೆ, 1989–95ರಲ್ಲಿ ನೀಡಲಾಗಿದ್ದ ಆದೇಶಗಳನ್ನು, ಕಾರ್ಯನೀತಿಯನ್ನು ಅಧಿಸೂಚನೆ ಹೊರಡಿಸಿದನಂತರ ಕಾರ್ಯಗತಗೊಳಿಸಲಾದ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಗಳಿಗೂಅನ್ವಯಗೊಳಿಸುವುದನ್ನು ಮುಂದುವರೆಸಿಕೊಂಡು ಹೋಯಿತು.

ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರವು ಹೊರಡಿಸಿದ ಕಾರ್ಯಾದೇಶಗಳು (1989–95) ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾರ್ಯನೀತಿ 2007ರಲ್ಲಿ ಚಿಂತಿಸಿದ್ದಂತಹ ಯೋಜನೆಯಿಂದ ಸ್ಥಳಾಂತರಿತ ಕುಟುಂಬಗಳಿಗೆ ನೀರಾವರಿ ಪ್ರದೇಶದಲ್ಲಿ ಭೂಮಿ ಹಂಚಿಕೆಯ ಪ್ರಮುಖ ಅನುವನ್ನು ಸೇರಿಸಿರಲಿಲ್ಲ.ತಮ್ಮ ಕೃಷಿ ಭೂಮಿಯನ್ನು ಕಳೆದುಕೊಂಡ ಯೋಜನೆಯಿಂದ ಸ್ಥಳಾಂತರಿತ ಕುಟುಂಬಗಳು ನೀರಾವರಿ ಪ್ರದೇಶದಲ್ಲಿ ಭೂಮಿ ಹಂಚಿಕೆಯಿಂದ ವಂಚನೆಗೊಳಗಾಗಿದ್ದಲ್ಲದೆ, ಅಸಮರ್ಪಕ ಪರಿಹಾರ ಮೊತ್ತವನ್ನೂ ಸ್ವೀಕರಿಸಿದ್ದರು.

ಸರ್ಕಾರವು ರಾಷ್ಟ್ರೀಯ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆ ಕಾರ್ಯನೀತಿಯನ್ನು ಉಲ್ಲಂಘಿಸಿ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಪ್ರಯೋಜನಗಳನ್ನು ಬಳಕೆದಾರರ ದರ ಸೂಚ್ಯಾಂಕಕ್ಕೆ ತಕ್ಕಂತೆ ಸರಿಹೊಂದಿಸಿರಲಿಲ್ಲ. ತತ್ಪರಿಣಾಮವಾಗಿ, 1989–95ರಲ್ಲಿ ನಿಗದಿಯಾಗಿದ್ದ ವಿವಿಧ ಹಣಕಾಸಿನ ಪ್ರಯೋಜನಗಳನ್ನು ಪರಿಷ್ಕರಣೆಗೆ ಒಳಪಡಿಸದೆಯೇ, ಈಗಲೂ ಪಾವತಿಸಲಾಗುತ್ತಿದೆ (2015–16).

### *ಸಾಮಾಜಿಕ–ಆರ್ಥಿಕ ಸಮೀಕ್ಷೆ*

ಸರ್ಕಾರವು, ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ನಡೆಸುವ ಸಲುವಾಗಿ ಯಾವುದೇ ನಿರ್ದಿಷ್ಟ ಮಾನದಂಡವನ್ನೂ ಕಡ್ಡಾಯಗೊಳಿಸಿರಲಿಲ್ಲ.ಸಾಮಾಜಿಕ–ಆರ್ಥಿಕ ಸಮೀಕ್ಷಾ ವರದಿಗಳು ಯೋಜನೆಯಿಂದ ಸ್ಥಳಾಂತರಗೊಂಡವರ ವರಮಾನ, ಗ್ರಾಮೀಣ ಕುಶಲಕರ್ಮಿಗಳ ವಿವರಗಳು, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಕುಟುಂಬಗಳ ಪ್ರವರ್ಗಗಳು, ನಿರ್ಗತಿಕರು, ಅನಾಥರು, ವಿಧವೆಯರ ವಿವರಗಳನ್ನು ಒಳಗೊಂಡಿರಲಿಲ್ಲ.

ಯೋಜನೆಯನ್ನು ಕಾರ್ಯಗತಗೊಳಿಸುವ ಪೂರ್ವಾವಧಿಯಲ್ಲಿ ಹಾಗೂ ಕಾರ್ಯಗತಗೊಳಿಸಿದನಂತರದಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳ ಜೀವನದ ಸ್ಥಿತಿಗತಿಯ ಬಗ್ಗೆ ಮೂಲ ಮಾಹಿತಿಯ ಅನುಪಸ್ಥಿತಿಯಲ್ಲಿ, ಯೋಜನೆಯಿಂದ ದುರ್ಬಲಗೊಂಡ ಕುಟುಂಬಗಳ ಆರ್ಥಿಕ ಸ್ಥಿತಿಗತಿಯಲ್ಲಿ ಉತ್ತಮಗೊಂಡಿರುವುದು ಅಥವಾ ಉತ್ತಮಗೊಂಡಿಲ್ಲದಿರುವುದರ ಬಗ್ಗೆ ನಿರ್ಧಾರಣೆ ಮಾಡಲು ಸಾಧ್ಯವಾಗುವುದಿಲ್ಲ, ಅಲ್ಲದೇ ಸಮಾಜದ ಕೆಲವು ವಿಭಾಗಗಳಿಗೆ ಆದ್ಯತೆ ಅಥವಾ ವಿಶೇಷ ಗಮನವನ್ನು ಕೊಟ್ಟಿದ್ದರ ಬಗ್ಗೆ ಖಚಿತಪಡಿಸಿಕೊಂಡಿರಲಿಲ್ಲ, ಅದು ರಾಷ್ಟ್ರೀಯ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಕಾರ್ಯನೀತಿಯ ಅನುಸಾರವಾಗಿರಲಿಲ್ಲ.

### *ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಪೂರ್ಣಗೊಳಿಸುವಲ್ಲಿ ವಿಪರೀತವಾದ ವಿಳಂಬ*

ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ 14 ಗ್ರಾಮಗಳು ಕೇಂದ್ರ ಜಲ ಆಯೋಗದ ಭೂಸ್ವಾಧೀನ ಪ್ರಮಾಣಕಗಳ ವ್ಯಾಪ್ತಿಯಲ್ಲಿ ಬರುತ್ತಿದ್ದವಾದರೂ, ಈ ಗ್ರಾಮಗಳು ಆಗಸ್ಟ್ 2005ರಲ್ಲಿ ಹೊರಬಿಡಲಾದ ಪ್ರವಾಹ ನೀರಿನಿಂದ ಮುಳುಗಡೆಯಾದಾಗ ಹಾಗೂ ತೊಂದರೆಗೆ ಈಡಾದ ಜನತೆಯ ಕೋರಿಕೆಗಳ ನಂತರ ಪುನರ್ವಸತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು. ಸರ್ಕಾರವು, ಈ ಗ್ರಾಮಗಳ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಗಾಗಿ ಆದೇಶಗಳನ್ನು ಜನವರಿ 2007/ಸೆಪ್ಟಂಬರ್ 2009ರಲ್ಲಿ ನೀಡಿತು.

### *ಅಸಮರ್ಪಕವಾದ ಭೂಮಿ ಖರೀದಿ ಹಾಗೂ ಪ್ರಯೋಜನಗಳನ್ನು ವಿತರಿಸದಿದ್ದುದು*

ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ತೊಂದರೆಗೆ ಈಡಾದ 14 ಗ್ರಾಮಗಳಿಗೆ ಸಂಬಂಧಿಸಿದಂತೆ, ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ ನಿರ್ಮಾಣಗಳಲ್ಲಿ (ಮನೆ ಮತ್ತು ಕಟ್ಟಡಗಳು) ಹಾಗೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಪರೀತವಾದ ವಿಳಂಬವಾಯಿತು. ಪುನರ್ವಸತಿಯನ್ನು ನಿರೀಕ್ಷಿಸುತ್ತಾ, ಈ ಗ್ರಾಮಗಳಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡ 4,274 ಕುಟುಂಬಗಳಿದ್ದವು (ಡಿಸೆಂಬರ್ 2015).

ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ ಭೂಮಿಯನ್ನು ಅಸಮರ್ಪಕವಾಗಿ ಸ್ವಾಧೀನಪಡಿಸಿಕೊಂಡಿದ್ದ ಪ್ರಕರಣಗಳಿದ್ದವು, ಇದು ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸುವಲ್ಲಿ ವಿಳಂಬಗಳು ಉಂಟಾಗುವಲ್ಲಿ ಪರಿಣಮಿಸಿತು. ಕಟ್ಟಡಗಳು ಹಾಗೂ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಕೇವಲ ಡಿಸೆಂಬರ್ 2014 ಹಾಗೂ ಡಿಸೆಂಬರ್ 2015ರ

ನಡುವಿನಲ್ಲಿ ಪೂರ್ಣಗೊಳಿಸಲಾಯಿತು. 14 ಗ್ರಾಮಗಳ ಪೈಕಿ ಎರಡು ಗ್ರಾಮಗಳಿಗೆ ಭೂ ಸ್ವಾಧೀನವು ಪೂರ್ಣಗೊಂಡಿರಲಿಲ್ಲ (ಡಿಸೆಂಬರ್ 2015).

ಭೂಮಿ ಹಾಗೂ ವಸತಿ ನಿರ್ಮಾಣ ಅನುದಾನಗಳು, ವರಮಾನ ಉತ್ಪತ್ತಿ ಮಾಡುವ ಅನುದಾನಗಳು, ಇತ್ಯಾದಿ ಇತರೆ ಪ್ರಯೋಜನಗಳನ್ನು ಈ 14 ಗ್ರಾಮಗಳಲ್ಲಿ ಯೋಜನೆಯಿಂದ ಸ್ಥಳಾಂತರಗೊಂಡ ಯಾವುದೇ ಕುಟುಂಬಕ್ಕೂ ವಿತರಣೆ ಮಾಡಿರಲಿಲ್ಲ (ಡಿಸೆಂಬರ್ 2015).

### *ಕಾರ್ಯಗತಗೊಳಿಸುವಿಕೆಯು ನಿಕೃಷ್ಟಮಟ್ಟದಿಂದ ಕೂಡಿದ್ದುದು*

ಆಲಮಟ್ಟಿ ಅಣೆಕಟ್ಟಿನಿಂದ ಬಾಗಲಕೋಟೆ ಪಟ್ಟಣದಲ್ಲಿ (ಜಲಾಶಯ ಮಟ್ಟ 521 ಮೀಟರುಗಳು ಹಾಗೂ ಜಲಾಶಯ ಮಟ್ಟ 523 ಮೀಟರುಗಳ ನಡುವೆ ವಾಸಿಸುತ್ತಿದ್ದಂತಹ) ತೊಂದರೆಗೆ ಈಡಾದ ಜನತೆಯು ಮಾಡಿದ ಪ್ರತಿಭಟನೆ ಹಾಗೂ ನೀಡಿದ ದೂರುಗಳ ಆಧಾರದ ಮೇರೆಗೆ, ಅವರುಗಳು ಜಲಾಶಯದ ಹಿನ್ನೀರಿನ ಕಾರಣ ಗಂಭೀರವಾದ ಅನಾರೋಗ್ಯಕರ ಸ್ಥಿತಿಯಿಂದ ತೊಂದರೆಗಳಿಗೆ ಈಡಾಗಿದ್ದರಿಂದ, ಸರ್ಕಾರವು, ಅವರುಗಳ ಪುನರ್ವಸತಿಗಾಗಿ ಆದೇಶವನ್ನು ಹೊರಡಿಸಿತು (ನವಂಬರ್ 2002).

ಸರ್ಕಾರದಿಂದ ನವಂಬರ್ 2002ರಲ್ಲಿ ನಿರ್ದೇಶನಗಳನ್ನು ಸ್ವೀಕರಿಸಿದ್ದಾಗ್ಯೂ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು, ಈ ವಿಷಯವನ್ನು ಜೂನ್ 2010ರಲ್ಲಿಯಷ್ಟೇ ನಿರ್ದೇಶಕರುಗಳ ಮಂಡಳಿಯ ಮುಂದೆ ತಂದಿದ್ದಿತು ಹಾಗೂ ಯೋಜನೆಯಿಂದ ಸ್ಥಳಾಂತರಗೊಂಡಿದ್ದ ಈ ಕುಟುಂಬಗಳಿಗೆ ಇನ್ನೂ ಪುನರ್ವಸತಿಯನ್ನು ಕಲ್ಪಿಸಬೇಕಾಗಿದೆ(ಡಿಸೆಂಬರ್ 2015). ಭೂಮಿಯೊಳಗಿನ ಚರಂಡಿ ವ್ಯವಸ್ಥೆ, ರಸ್ತೆಗಳ ನಿರ್ಮಾಣ ಹಾಗೂ ಪುನರ್ವಸತಿ ಕೇಂದ್ರಗಳಲ್ಲಿ ವಿದ್ಯುದೀಕರಣ ಕಾಮಗಾರಿಗಳನ್ನು 2013–14ರಲ್ಲಿಯಷ್ಟೇ ಕೈಗೆತ್ತಿಕೊಳ್ಳಲಾಗಿತ್ತು ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು 2014–15ರಲ್ಲಿ ಪ್ರಾರಂಭಿಸಲಾಯಿತು.

### *ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯೇತರ ಚಟುವಟಿಕೆಗಳಿಗೆ ಭೂಮಿಯ ಹಂಚಿಕೆ*

ಬಾಗಲಕೋಟೆ ಪಟ್ಟಣವನ್ನು ಸ್ಥಳಾಂತರಿಸುವ ಸಲುವಾಗಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರವು 4,544 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು (1986–87). ಇದರ ಪೈಕಿ, 3230 ಎಕರೆಗಳನ್ನು 523 ಮೀಟರುಗಳಷ್ಟು ಜಲಾಶಯ ಮಟ್ಟದವರೆಗಿನ ಯೋಜನೆಯಿಂದ ಸ್ಥಳಾಂತರಗೊಂಡವರ/ಸಂಕಷ್ಟಕ್ಕೆ ಈಡಾದವರ ಪುನರ್ವಸತಿಗಾಗಿ ಬಳಸಿಕೊಳ್ಳಲಾಯಿತು ಹಾಗೂ ಇನ್ನೂ ಹೆಚ್ಚಿನ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಾಗಿ 3,600 ಎಕರೆಗಳಷ್ಟು ಭೂಮಿಯ ಅಗತ್ಯತೆಯು ಇದ್ದ ವಾಸ್ತವಾಂಶದ ಹೊರತಾಗಿಯೂ, ಉಳಿದ 1,168 ಎಕರೆಗಳನ್ನು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಲ್ಲದ ಇತರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಯಿತು, ಇದು ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯತೆಯನ್ನುಂಟುಮಾಡಿತು ಹಾಗೂ ತತ್ಪರಿಣಾಮವಾಗಿ ಯೋಜನೆಯಿಂದ ಸ್ಥಳಾಂತರಗೊಂಡ/ಸಂಕಷ್ಟಕ್ಕೆ ಈಡಾದ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವಲ್ಲಿ ವಿಳಂಬವಾಯಿತು.

### *ಮೇಲ್ವಿಚಾರಣೆ*

ಸರ್ಕಾರ, ಕಂಪನಿ ಹಾಗೂ ಯೋಜನಾ ಮಟ್ಟಗಳಲ್ಲಿ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಮೇಲ್ವಿಚಾರಣೆಯು ಪರಿಣಾಮಕಾರಿಯಾಗಿರಲಿಲ್ಲ, ಇದು ಕಾರ್ಯಗತಗೊಳಿಸುವಿಕೆಯ ವಿವಿಧ ಹಂತಗಳಲ್ಲಿ ವಿಪರೀತವಾದ ವಿಳಂಬಗಳಾಗುವಲ್ಲಿ ಪರಿಣಮಿಸಿತು. ಯೋಜನಾ ಕಚೇರಿಗಳಲ್ಲಿ ಪ್ರಮುಖ ಹುದ್ದೆಗಳಲ್ಲಿ ಸಿಬ್ಬಂದಿಯ ಕೊರತೆಯಿತ್ತು. ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಯು ಇರಲಿಲ್ಲ.

### *ನಿರ್ಣಯಗಳು*

**ಲೆಕ್ಕಪರಿಶೋಧನೆಯು ಈ ಕೆಳಗಿನ ತೀರ್ಮಾನಗಳಿಗೆ ಬಂದಿದೆ:**

- ಸರ್ಕಾರವು, ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿ, 2007ರ ಮಾದರಿಯಲ್ಲಿಯೇ ರಾಜ್ಯಕ್ಕಾಗಿ ಒಂದು ನಿರ್ದಿಷ್ಟವಾದ ಹಾಗೂ ಸಮಗ್ರವಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿಯನ್ನು ರೂಪಿಸಿರಲಿಲ್ಲ.

- ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿ, 2007ರ ಅನುಸಾರ, ಸರ್ಕಾರವು ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ನಡೆಸಲಿಲ್ಲವಾದ್ದರಿಂದ, ಯೋಜನೆಯಿಂದ ದುರ್ಬಲಗೊಂಡ ಕುಟುಂಬಗಳ, ಯೋಜನೆಯನ್ನು ಕಾರ್ಯಗತಗೊಳಿಸುವ ಪೂರ್ವಾವಧಿಯಲ್ಲಿ ಇದ್ದಂತಹ ಅವರ ಆರ್ಥಿಕ ಸ್ಥಿತಿಯ ಸಮಕ್ಕೆ ಮರಳಿ ತಂದಿರುವುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಇದು ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸಿತು.

- ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವಲ್ಲಿ ಸರ್ಕಾರದ ಒಟ್ಟಾರೆ ನಿರಾಸಕ್ತಿ/ನಿರುತ್ಸಾಹದ ಕಾರಣ ಬಾಗಲಕೋಟೆ ಪಟ್ಟಣದಲ್ಲಿನ ಯೋಜನೆಯಿಂದ ಸ್ಥಳಾಂತರಗೊಂಡ 6,329 ಕುಟುಂಬಗಳು ಹಾಗೂ 14 ಗ್ರಾಮಗಳಲ್ಲಿನ 4,274 ಕುಟುಂಬಗಳಿಗೆ ಅನುಕ್ರಮವಾಗಿ 2002ರಿಂದ ಹಾಗೂ 2007ರಿಂದ ಪುನರ್ವಸತಿಯನ್ನು ಇನ್ನೂ ಕಲ್ಪಿಸಬೇಕಾಗಿದೆ.

- ಒಂದು ಸೂಕ್ತ ಸಮಯದ ಒಳಗೆ ತೊಂದರೆಗೆ ಈಡಾದ ಜನತೆಗೆ ಪುನರ್ವಸತಿ ಕಲ್ಪಿಸುವಲ್ಲಿನ ಸರ್ಕಾರದ ವಿಫಲತೆಯು ಯೋಜನೆಯಿಂದ ಸ್ಥಳಾಂತರಗೊಂಡ ಅನೇಕ ಕುಟುಂಬಗಳಿಗೆ ಪುನರ್ವಸತಿ ಹಾಗೂ ಪುನರ್ವ್ಯವಸ್ಥೆಯ ಅಡಿಯಲ್ಲಿ ಅರ್ಹವಿರುವ ಪ್ರಯೋಜನಗಳನ್ನು ನಿರಾಕರಿಸುವಂತಾಯಿತು ಹಾಗೂ ಕಳೆದ ಹತ್ತು ವರ್ಷಗಳ ಕಾಲ ಅವರುಗಳು ತಾತ್ಕಾಲಿಕ ಶೆಡ್ಡುಗಳಲ್ಲಿ ವಾಸಿಸುವಂತೆ ಮಾಡಿತು.

- ಮೇಲ್ವಿಚಾರಣಾ ವ್ಯವಸ್ಥೆಯು ಪರಿಣಾಮಕಾರಿಯಾಗಿರಲಿಲ್ಲ ಮತ್ತು ಮಾನವಶಕ್ತಿಯ ಕೊರತೆಯು ಅನುಷ್ಠಾನವನ್ನು ತೊಂದರೆಗೀಡುಮಾಡಿತು.

### *ಶಿಫಾರಸ್ಸುಗಳು*

**ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಶಿಫಾರಸು ಮಾಡುತ್ತಿದೆ:**

- ಸರ್ಕಾರವು, ರಾಷ್ಟ್ರೀಯ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಕಾಯ್ದೆ, 2007ರ ಮಾದರಿಯಂತೆ ರಾಜ್ಯಕ್ಕಾಗಿ ಒಂದು ನಿರ್ದಿಷ್ಟವಾದ ಹಾಗೂ ಸಮಗ್ರವಾದ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯ ಕಾರ್ಯನೀತಿಯನ್ನು ರೂಪಿಸಬೇಕು, ಮತ್ತು ಯೋಜನೆಯಿಂದ ಸ್ಥಳಾಂತರಗೊಂಡ ಕುಟುಂಬಗಳಿಗೆ ನ್ಯಾಯಯುತವಾಗಿ ಸಿಗಬೇಕಾಗಿದ್ದ ಸವಲತ್ತುಗಳು ಸಿಗುವಂತೆ ಮಾಡಲು ಅನುವುಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

- ಭೂಮಿ ಮತ್ತು ಕಟ್ಟಡಗಳನ್ನು ಸ್ವಾಧಿನಪಡಿಸಿಕೊಳ್ಳಲು ಕೇಂದ್ರ ಜಲ ಆಯೋಗದ ಪ್ರಮಾಣಕಗಳಿಗೆ ಬದ್ಧವಾಗಿರಬೇಕು ಮತ್ತು ಪುನರ್ವಸತಿ ಕೇಂದ್ರಗಳನ್ನು ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳೊಂದಿಗೆ ಪ್ರಮಾಣಕಗಳಿಗೆ ಅನುಗುಣವಾಗಿ ಸಮಯೋಚಿತವಾಗಿ ನಿರ್ಮಾಣ ಮಾಡಬೇಕು.

- ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಚಟುವಟಿಕೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಇತರೆ ಉದ್ದೇಶಕ್ಕಾಗಿ ಬಳಸುವುದನ್ನು ತಡೆಗಟ್ಟಲು ಸರ್ಕಾರವು ಸೂಕ್ತ ಆದೇಶಗಳನ್ನು ಹೊರಡಿಸಬೇಕು.

- ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಇರುವ ತೊಂದರೆಗಳನ್ನು ಚರ್ಚಿಸಲು ಹಾಗೂ ನಿವಾರಣೆಯ ಮೇಲ್ವಿಚಾರಣೆ ಉದ್ದೇಶದಿಂದ ನೇಮಿಸಿರುವ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಬೇಕು. ಕಂಪನಿಯೂ ಸಹ ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಪ್ರಗತಿಯನ್ನು ನಿರ್ದೇಶಕರ ಮಂಡಳಿ ಸಭೆಯಲ್ಲಿ ಚರ್ಚಿಸಬೇಕು ಹಾಗೂ ಸಮಯೋಚಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು.

- ಸಮಯೋಚಿತವಾಗಿ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಸಾಕಷ್ಟು ಸಿಬ್ಬಂದಿಯನ್ನು ಯೋಜನಾ ಕಛೇರಿಗಳಿಗೆ ಒದಗಿಸಬೇಕು.

***(ಅಧ್ಯಾಯ 2.2)***

## 3. ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ಈ ವರದಿಯಲ್ಲಿ ಸೇರಿಸಲಾಗಿರುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತ ಅಂಶಗಳು, ಹಣಕಾಸಿನ ಪರಿಣಾಮಗಳನ್ನು ಹೊಂದಿರುವಂತೆ, ಸಾರ್ವಜನಿಕ ವಲಯದ ಉದ್ದಿಮೆಗಳ ವ್ಯವಸ್ಥಾಪನೆಯಲ್ಲಿನ ಪೂರ್ವಭಾವಿ ಯೋಜನೆ, ಹೂಡಿಕೆ ಮತ್ತಿತರ ಕಾರ್ಯಚಟುವಟಿಕೆಗಳಲ್ಲಿನ ನ್ಯೂನತೆಗಳನ್ನು ಎತ್ತಿತೋರಿಸುತ್ತವೆ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು ವಿಸ್ತೃತವಾಗಿ ಈ ಕೆಳಗಿನ ಸ್ವರೂಪದ್ದಾಗಿರುತ್ತವೆ:

*₹ 37.21 ಕೋಟಿ ಮೊತ್ತದಷ್ಟು ನಿಷ್ಫಲ ಹೂಡಿಕೆ*

***(ಕಂಡಿಕೆಗಳು 3.2, 3.3, 3.10, 3.16, 3.17)***

*ಗುತ್ತಿಗೆ ಷರತ್ತುಗಳ ಉಲ್ಲಂಘನೆ/ಗುತ್ತಿಗೆದಾರರಿಗೆ ಅನರ್ಹ ಲಾಭವನ್ನು ಮಾಡಿಕೊಟ್ಟಿದ್ದುದು ₹ 14.97 ಕೋಟಿ ಮೊತ್ತದಷ್ಟು ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು.*

***(ಕಂಡಿಕೆಗಳು 3.5, 3.7, 3.8, 3.9, 3.15.4)***

*₹ 30.60 ಕೋಟಿ ಮೊತ್ತದಷ್ಟು ಬಾಕಿಗಳನ್ನು ವಸೂಲಾತಿ ಮಾಡದಿದ್ದುದು.*

***(ಕಂಡಿಕೆಗಳು 3.1, 3.11)***

*₹ 65.34 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ವೆಚ್ಚಗಳು.*

***(ಕಂಡಿಕೆಗಳು 3.4, 3.6, 3.12, 3.15.4)***

*₹ 1.53 ಕೋಟಿ ಮೊತ್ತದಷ್ಟು ವಿವಿಧ/ಮತ್ತಿತರ ಪ್ರಕರಣಗಳು.*

***(ಕಂಡಿಕೆ 3.15.7)***

**ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಕೆಲವು ಪ್ರಮುಖ ಅಂಶಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:**

- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಂತ್ರಣಗಳು, 2004ರಲ್ಲಿ ನಿರ್ದಿಷ್ಟಪಡಿಸಿದ್ದ ಕಾರ್ಯವಿಧಾನಗಳನ್ನು ಅನುಸರಿಸುವಲ್ಲಿ ವಿಫಲಗೊಂಡಿತು ಹಾಗೂ ಕ್ರೋಡೀಕೃತಗೊಂಡಿದ್ದ ಬಾಕಿಗಳ ವಸೂಲಾತಿಯನ್ನು ಖಚಿತಪಡಿಸಿಕೊಳ್ಳದೆಯೇ ವಿದ್ಯುತ್ತಿನ ಮುಕ್ತ ಬಳಕೆ ಅನುಕೂಲತೆಗಳನ್ನು ಮಂಜೂರು ಮಾಡುವುದನ್ನು ಮುಂದುವರೆಸಿಕೊಂಡು ಹೋಯಿತು, ಇದು, ₹ 29.21 ಕೋಟಿ ಮೊತ್ತದಷ್ಟು ವರಮಾನದ ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು.

***(ಕಂಡಿಕೆ 3.1)***

- ಮೆಳೆಹಳ್ಳಿಯಲ್ಲಿನ ವಿದ್ಯುತ್ ಹೊರೆ ಮಾದರಿಯನ್ನು ಅಧ್ಯಯನ ಮಾಡದೆಯೇ ₹ 15.97 ಕೋಟಿ ವೆಚ್ಚದಲ್ಲಿ ಜಾಲಮಂಗಲ, ಕುಟಗಲ್ಲು ಹಾಗೂ ಚಿಕ್ಕಗಂಗನವಾಡಿಯಲ್ಲಿ ಉಪ–ಸ್ಟೇಷನ್ನುಗಳನ್ನು ಸ್ಥಾಪಿಸಿದ್ದು ಅಗತ್ಯತೆಯ ಆಧಾರದ ಮೇರೆಗೆ ಆಗಿರಲಿಲ್ಲ ಹಾಗೂ ಈ ಹೂಡಿಕೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಯಾವುದೇ ಸೂಕ್ತ ಮೌಲ್ಯ ವರ್ಧನೆಯನ್ನೂ ನೀಡಲಿಲ್ಲ.

***(ಕಂಡಿಕೆ 3.2)***

- ಮೈಸೂರು ಸಕ್ಕರೆ ಕಂಪನಿ ನಿಯಮಿತವು, ಇಂಧನದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೆ ಹಾಗೂ ಮಿಲ್ಲುಗಳ ಆಧುನೀಕರಣದ ಜೊತೆ ಏಕಕಾಲಿಕವಾಗಿಸದೆ ವಿದ್ಯುತ್ತಿನ ಸಹ–ಉತ್ಪಾದನಾ ಯೋಜನೆಯನ್ನು ಕಾರ್ಯಗತಗೊಳಿಸಿದ್ದು, ₹ 124.08 ಕೋಟಿ ಮೊತ್ತದಷ್ಟು ಹೂಡಿಕೆಯು ನಿಷ್ಫಲಗೊಳ್ಳುವಲ್ಲಿ ಹಾಗೂ ₹ 59.04 ಕೋಟಿ ಮೊತ್ತದಷ್ಟು ಬಡ್ಡಿಯ ಹೊರೆಯನ್ನು ಸಹ ಹೊತ್ತುಕೊಳ್ಳುವಲ್ಲಿ ಪರಿಣಮಿಸಿತು.

***(ಕಂಡಿಕೆ 3.4)***

- ಕರ್ನಾಟಕ ನೀರಾವರಿ ನಿಗಮ ನಿಯಮಿತವು ಸಿಂಗಟಲುರು ಎಡದಂಡೆ ಏತ ನೀರಾವರಿ ಯೋಜನೆಯಕಾಮಗಾರಿಗಳಿಗೆ ಇತರ ಅದೇ ರೀತಿಯ ಕಾಮಗಾರಿಗಳಿಗೆ ಹೋಲಿಸಿದಲ್ಲಿ ಅಧಿಕ ಮಟ್ಟದ ದರಗಳನ್ನು ಹೊಂದಿದ್ದ ವಿಭಿನ್ನ ಗುಂಪಿನ ಸಗಟು ದರ ಸೂಚ್ಯಂಕವನ್ನು ಅಳವಡಿಸಿಕೊಂಡಿದ್ದು ನ್ಯಾಯಸಮ್ಮತತೆಯಿಂದ ಕೂಡಿರಲಿಲ್ಲ ಹಾಗೂ ಗುತ್ತಿಗೆದಾರರಿಗೆ ₹ 5.18 ಕೋಟಿ ಮೊತ್ತದಷ್ಟು ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.

***(ಕಂಡಿಕೆ 3.8)***

- ಗುತ್ತಿಗೆದಾರರ ಜೊತೆ ಒಡಂಬಡಿಕೆಯನ್ನು ಮಾಡಿಕೊಂಡನಂತರ ಕರ್ನಾಟಕ ರಾಜ್ಯ ತೆಂಗಿನನಾರು ಅಭಿವೃದ್ಧಿ ನಿಗಮ ನಿಯಮಿತವು ಘೋಷಿಸಲಾಗಿದ್ದಂತಹ ದರವನ್ನು ಮೇಲ್ಮುಖ ಪರಿಷ್ಕರಣೆ ಮಾಡಿದ ಕಾರಣ ಹಾಗೂ ಘೋಷಿಸಿಕೊಂಡಿದ್ದ ದರಕ್ಕೆ ಮೌಲ್ಯ ವರ್ಧಿತ ತೆರಿಗೆಯನ್ನು ಸೇರಿಸಿದ ಕಾರಣ, ಗುತ್ತಿಗೆದಾರರಿಗೆ ₹ 3.17 ಕೋಟಿ ಮೊತ್ತದಷ್ಟು ಅಸಮರ್ಥನೀಯವಾದಂತಹ ಲಾಭವನ್ನು ಮಾಡಿಕೊಟ್ಟಿತು.

***(ಕಂಡಿಕೆ 3.9)***

- ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ವಲಯದ ಅಭಿವೃದ್ಧಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವನ್ನು ಸಂಪರ್ಕಸೇತು ಸಂಸ್ಥೆಯನ್ನಾಗಿ ನೇಮಕ ಮಾಡಲಾಗಿತ್ತು. ಆದರೆ, ಅದು ನವೀಕರಿಸಬಹುದಾದ ಇಂಧನ ವಲಯದಲ್ಲಿನ ಯೋಜನೆಗಳನ್ನು ಗುರುತಿಸುವ ಹಾಗೂ ಅಭಿವೃದ್ಧಿಪಡಿಸುವ ಒಂದು ಪ್ರಮುಖ ಪಾತ್ರವನ್ನು ವಹಿಸಿರಲಿಲ್ಲ ಹಾಗೂ ತತ್ಪರಿಣಾಮವಾಗಿ ಸೌರ ಹಾಗೂ ಗಾಳಿಯಿಂದ ತಯಾರಿಸಬಹುದಾದ ಇಂಧನ ಶಕ್ತಿಗಳು ಹೊರತೆಗೆಯದೇ ಉಳಿದುಕೊಂಡವು. ಜೈವಿಕತ್ಯಾಜ್ಯ ವಲಯವು, ಕಚ್ಚಾ ಸಾಮಗ್ರಿಗಳು ಹಾಗೂ ಆಕರ್ಷಕ ದರದ ಕೊರತೆಯ ಕಾರಣ ವಿಫಲಗೊಂಡಿತು, ತ್ಯಾಜ್ಯದಿಂದ ಇಂಧನ ಯೋಜನೆಯು ಕಳೆದ 12 ವರ್ಷಗಳಿಂದಲೂ ಯಾವುದೇ ಬೆಳವಣಿಗೆ ಕಂಡಿರಲಿಲ್ಲ.

***(ಕಂಡಿಕೆ 3.13)***

- ಕಾರ್ಯಾಚರಣೆಗಳ ಮಾನದಂಡಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಹಾಗೂ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರಿಗೆ ಟ್ಯಾಕ್ಸಿ ಸೇವೆಗಳ ಕಾರ್ಯಾಚರಣೆಗಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ಕರೆ ಕೇಂದ್ರವನ್ನು (ಕಾಲ್ ಸೆಂಟರ್)ಸ್ಥಾಪಿಸುವಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ವಿಫಲತೆಯು ಕಂಪನಿಯ ಹಾಗೂ ಬೆಂಗಳೂರಿನ ಹೆಸರನ್ನು ಮಾತ್ರವಲ್ಲದೇ ಸರ್ವಪ್ರಧಾನ ಪ್ರಾಮುಖ್ಯತೆಯನ್ನು ಹೊಂದಿರುವ ಪ್ರಯಾಣಿಕರ ಸುರಕ್ಷತೆಯನ್ನೂ ಸಹ ಸಂಭಾವ್ಯ ಅಪಾಯಕ್ಕೆ ಸಿಲುಕಿಸುವಂತಾಯಿತು.

***(ಕಂಡಿಕೆ 3.14)***

- ಕರ್ನಾಟಕ ರಾಜ್ಯ ಉಗ್ರಾಣ ನಿಗಮವು, ರಾಜ್ಯದಲ್ಲಿನ ಸಂಗ್ರಹಣಾ ಅನುಕೂಲತೆಗಳಿಗಾಗಿನ ಬೇಡಿಕೆ ಹಾಗೂ ಲಭ್ಯವಿರುವುವುಗಳ ನಡುವಿನ ಅಂತರವನ್ನು ನಿರ್ಧಾರಣೆ ಮಾಡಿರಲಿಲ್ಲ. ಉಗ್ರಾಣಗಳ ನಿರ್ಮಾಣವನ್ನು ಪೂರ್ಣಗೊಳಿಸಲು ವಿಳಂಬವಾಯಿತು. ಸಂಗ್ರಹಣಾ ಶುಲ್ಕಗಳ ವಸೂಲಾತಿಯ ವ್ಯವಸ್ಥೆಯು ನ್ಯೂನತೆಗಳಿಂದ ಕೂಡಿದ್ದಿತು. ನಿಗಮವು, ವೈಜ್ಞಾನಿಕ ಸಂಗ್ರಹಣೆಗಾಗಿ ಹಾಗೂ ತರಬೇತಿ ಹೊಂದಿದ ಸಿಬ್ಬಂದಿಗಳ ಲಭ್ಯತೆಗಾಗಿ ಉಗ್ರಾಣಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮದ ಪ್ರಮಾಣಕಗಳನ್ನು ಪೂರೈಸಿರಲಿಲ್ಲ.

***(ಕಂಡಿಕೆ 3.15)***

- ಬೆಂಗಳೂರು ಮಹಾನಗರ ಸಾರಿಗೆ ನಿಗಮವು ಸಮರ್ಪಕ ಕಾರ್ಯತತ್ಪರತೆಯಿಂದ ಕಾರ್ಯನಿರ್ವಹಿಸದೆಯೇ ಭೂಮಿಯ ಪೂರ್ವಾದಿ ಮುಂತಾದವುಗಳಿಲ್ಲದ ನಿರ್ಬಾಧಿತ ಹಕ್ಕುಪತ್ರಗಳನ್ನು ತನ್ನ ಪರವಾಗಿ ಪಡೆಯದೆಯೇ ವಿವಾದಿತ ಭೂಮಿಯಲ್ಲಿ ಬಸ್ಸು ಡಿಪೋಗಳಿಗಾಗಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಿತು.ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ಹಾಗೂ ಹಂಚಿಕೆಯ ಷರತ್ತುಗಳಿಗೆ ಬದ್ಧವಾಗಿರದೆಯೇ ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಿಕೊಂಡು ಹೋಗಿದ್ದು ಸೃಷ್ಟಿಸಲಾದಂತಹ ಆಸ್ತಿಗಳು ನಿರುಪಯುಕ್ತವಾಗಿರುವಲ್ಲಿ ಹಾಗೂ ₹ 16.52 ಕೋಟಿ ಮೊತ್ತದಷ್ಟು ಹೂಡಿಕೆಗಳನ್ನು ಬಳಕೆಯಾಗದೇ ಕೂಡಿಟ್ಟಿರುವಲ್ಲಿ ಪರಿಣಮಿಸಿತು.

***(ಕಂಡಿಕೆ 3.16)***